## ಇಲ್ಲಿಯವರೆಗೆ



ಚಂದನಿಕಾ ಉಟ್ಟ ಸೀರೆ ನೋಡಿ ಆನಂದ ಮೆಚ್ಚುಗೆ ವ್ಯಕ್ತಪಡಿಸಿದ. ಇದರಿಂದ ಚಂದನಿಕಾ ನಾಚಿ ನೀರಾಗುತ್ತಾಳೆ. ಹೊಳೆಯ ಬದಿಯಲ್ಲಿ ಕುಳಿತು ಕಾಲುಗಳನ್ನು ನೀರಿನಲ್ಲಿ ಇಳಿಬಿಟ್ಟು 'ನಿನಗೆ ಈಜಲು ಬರುತ್ತದಾ ಚಂದನಿಕಾ' ಎನ್ನುತ್ತಾನೆ. ಯಾಕೆ ನಿಮಗೆ ಈಜಾಡಲು ಇಷ್ಟವಾ ಎಂದು ಹೇಳಿದ್ದಲ್ಲದೆ ನಾನು ಬೇಕಾದರೆ ಈಜಾಡಲು ಕಲಿಸುವೆ; ನಿತ್ಯವೂ ಬಂದು ಈಜಾಡುವ' ಎಂದು ಹೇಳುತ್ತಾನೆ. ಇದರ ಒಳ ಅರ್ಥವನ್ನು ಅರಿತ ಚಂದನಿಕಾ ಮುಖ ಕೆಂಪಾಗುತ್ತದೆ. 'ನಿಮ್ಮ ಮನೆಯಲ್ಲಿ ನನ್ನನ್ನು ಒಪ್ಪಿಕೊಳ್ಳುತ್ತಾರಾ? ಎಂಬ ಪ್ರಶ್ನೆಯನ್ನು ಚಂದನಿಕಾ ಆನಂದ್‌ಗೆ ಕೇಳುತ್ತಾಳೆ. ತಂದೆ ತಾಯಿ ಅಜ್ಜಿ ಅಜ್ಜ ಅವರ ಮನಸ್ಥಿತಿ ಅರಿತ ಆನಂದ್ ಮದುವೆಗೆ ಒಪ್ಪಿಸುವುದು ಕಷ್ಟದ ಮಾತಲ್ಲ ಎನ್ನುತ್ತಾನೆ. ಆದರೆ ಚಂದನಿಕಾಗೆ ಊರೂರು ಸುತ್ತಿ ಧಾರಾವಾಹಿಗಳಲ್ಲಿ ನಟಿಸುವ ಕೆಲಸವಾದ್ದರಿಂದ ಮನೆಯಲ್ಲಿ ಉಳಿಯುವುದಿಲ್ಲ ಎಂಬ ಮಾತು ಬರುತ್ತದೆ. ಆಗ ಯಾವುದಾದರೂ ಶಾಲೆಯಲ್ಲಿ ಶಿಕ್ಷಕಿಯಾಗಿ ದುಡಿಯುವ ಇಂಗಿತ ವ್ಯಕ್ತಪಡಿಸಿ, ದೇಶ್ವಂತರು ಕಮಿಟಿ ಚೇರ್‌ಮನ್ ಆಗಿರುವ ಎರಡು ಶಾಲೆಗಳಲ್ಲಿ ಒಂದರಲ್ಲಿ ಕೆಲಸ ಪಡೆಯಬಹುದು ಎಂಬ ನಿರ್ಧಾರಕ್ಕೆ ಬರುತ್ತಾರೆ.

ಈ ಮಧ್ಯೆ ಧಾರಾವಾಹಿಯ ಜನಪ್ರಿಯತೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇತ್ತು. ಪ್ರತ್ರಕರ್ತ ಶಶಿಕಾಂತ ಪಾಟೀಲ ಸೆಟ್ ಬಳಿ ಬಂದು ಧಾರಾವಾಹಿಯ ಪ್ರಗತಿಯ ಬಗ್ಗೆ ಮಾತನಾಡಿ ಒಂದು ಒಳ್ಳೆಯ ಬರಹವನ್ನು ಪ್ರಕಟಿಸುತ್ತಾನೆ. ಮಳೆಯ ಅಬ್ಬರ ಏರುತ್ತದೆ. ಅದಾಗಿ ಆನಂದನ ಚಿಕ್ಕಪ್ಪ ಮುಂಬಯಿಯಿಂದ ಕರೆ ಮಾಡಿ ಫ್ಲ್ಯಾಟ್ ಖರೀದಿ ಮಾಡಿದ್ದು ಲಕ್ಷಾಂತರ ರೂಪಾಯಿ ಕಡಿಮೆ ಬೀಳುತ್ತದೆ ಆಸ್ತಿಯಲ್ಲಿ ತನ್ನದೂ ಹಕ್ಕಿರುವುದರಿಂದ ಹಣವನ್ನು ಕೊಡುವಂತೆ ಕೇಳುತ್ತಾನೆ. ಇದರಿಂದ ದೇಶ್ವಂತರು ಸೇರಿದಂತೆ ಮನೆಯವರಿಗೆಲ್ಲ ಕೋಪ ಬರುತ್ತದೆ

ಮಾಡಲಿಲ್ಲ. ಹೆಣ್ಣುಮಗು ಹುಟ್ಟಿತು. ಅದಕ್ಕೂ ತನ್ನ ಗತಿಯಾಗಬಾರದು ಅನಿಸಿದ್ದಕ್ಕೊ ಏನೋ, ಮಗುವಿಗೆ ಒಂದು ವರ್ಷವಾದಾಗ ದೂರದ ಸಂಬಂಧಿ ಸುಗಂಧಮ್ಮನಿಗೆ ಸಾಕಲು ಕೊಟ್ಟಳು. ಆಗಾಗ ಕಮಲಳನ್ನು ನೋಡಲು ಹೋಗುತ್ತಿದ್ದಳು. ಇಲ್ಲದಿದ್ದರೆ ವಿಶೇಷದಲ್ಲಿ ಸುಗಂಧಮ್ಮನೆ ಮಗುವನ್ನು ಕರೆದೊಯ್ಯುವುದಿತ್ತು. ಸುಗಂಧಮ್ಮ, ಕಮಲ ಬೆಳೆಯುತ್ತಿದ್ದಂತೆ ಓದಿ ಬರೆಯುವಷ್ಟು ವಿದ್ಯೆಯನ್ನು ಕಲಿಸುವ ವ್ಯವಸ್ಥೆ ಮಾಡಿದಳು. ಸುಮಾರು ಹನ್ನೆರಡು ವರ್ಷದಲ್ಲಿ, ಪ್ರಾಯ ಬರುವ ಸಮಯವಾದಾಗ ಚಂಚಲಮ್ಮ ಮಗಳಿಗೆ ತನ್ನ ಸಂಗತಿಯನ್ನೆಲ್ಲ ವಿವರಿಸಿದಳಂತೆ. ಬಹುಶಃ ಅವಳಿಗೆ ಇಂತಹ ಗಂಡಾಂತರಗಳ ಬಗ್ಗೆ ಎಚ್ಚರವಿರಲಿ ಅಂತಾಗಿರಬಹುದು. ಆ ಸಮಯದಲ್ಲಿ ಸುಗಂಧಮ್ಮನಿಗೆ ಏನೋ ದೊಡ್ಡ ಸಮಸ್ಯೆ ಬಂತು. ದೂರದ ಕಲಬುರ್ಗಿಯಲ್ಲಿ ಪರಿಚಯದವರ ಮೂಲಕ ಮಠದಯ್ಯನ ಆಶ್ರಯಕ್ಕೆ ಹೋದಳು. ಮಠದಯ್ಯ, ಕಮಲಮ್ಮ ಪ್ರಾಯಕ್ಕೆ ಬಂದಾಗ ಮದುವೆಯನ್ನೂ ಮಾಡಿಸಿದ್ದನಂತೆ. ಮತ್ತೆ ಹೆಣ್ಣುಮಗು ಹುಟ್ಟಿತು. ಏನೇನೋ ಆಯಿತು! ಆ ಮಗುವಿಗೆ ಅಪ್ಪನನ್ನು ನೋಡಿದ ನೆನಪಂತೂ ಇಲ್ಲ!

***

ನಿಟ್ಟುಸಿರು ಬಿಟ್ಟ ಆನಂದ ಚಂದನಿಕಾಳನ್ನೇ ನೋಡುತ್ತ ಕುಳಿತ. ಆಮೇಲೆ ಹೇಳಿದ: 'ಚಂದನಿಕಾ, ಇದನ್ನೆಲ್ಲ ಈಗ ಯಾಕೆ ಹೇಳಿದೆ? ನಾನು ಈ ಸಂಬಂಧ ಬೇಡ ಅನ್ನುವುದಾದರೆ ಅನ್ನಲಿ ಅಂತಲ್ಲವೇ? ಕೇಳು, ನನಗನಿಸೋದು ಏನು ಗೊತ್ತಾ? ನಂಗೆ ಇನ್ನೂ ಯೋಗ್ಯ ಹುಡುಗಿ ಸಿಗೋದು ಸಾಧ್ಯವೆ ಇರಲಿಲ್ಲ ಅಂತ. ಈಗ ನಿನ್ನಮೇಲೆ ಇನ್ನಷ್ಟು ಆಸೆಯಾಗತಾ ಇದೆ.' ಅವಳ ಮುಖದಲ್ಲಿ ಅಭಿಮಾನ ಉಕ್ಕುತ್ತಿತ್ತು. ಕಣ್ಣಲ್ಲಿ ನೀರು ತುಂಬಿಕೊಂಡಿತು. 'ನಿಮಗೆ ಬುದ್ಧಿಯೆ ಇಲ್ಲ; ಅನುಭವಿಸಿ!' ಮೆತ್ತಗೆ ಅವನ ಬೆನ್ನಮೇಲೆ ಗುದ್ದಿದಳು. ಖಾಲಿಯಾದ ನಿರಾಳತೆಯಲ್ಲಿ ಹುಟ್ಟಿದ ಆಯಾಸಕ್ಕೆ ಮೌನವಾಗಿ ಕುಳಿತಳು.

ಗುಡಿಯಲ್ಲಿ ಪ್ರಸಾದದ ಊಟವಿತ್ತು. ತೃಪ್ತಿಯಾಗಿ ಉಂಡರು. ಸ್ವಲ್ಪ ಹೊತ್ತು ಕುಳಿತಿದ್ದು ಮರಳಿ ಹೊರಟರು.

ನವರಾತ್ರಿ ಬಂತು. ಈ ಬಾರಿ ಮೂವತ್ತು ಜನ ಮಾತ್ರ ಬಂದಿದ್ದರು. ಇಷ್ಟು ಕಡಿಮೆ ಜನ ಇದೇ ಮೊದಲ ಬಾರಿಯಾಗಿತ್ತು. ಎಲ್ಲರೂ ಸಹಜ ಮಾತುಕತೆಯಲ್ಲಿದ್ದಂತೆ ಕಂಡರೂ ಏನೋ ಒಂದು ಒತ್ತಡ ಅಲ್ಲಿ ತುಂಬಿಕೊಂಡ ಅನುಭವವಾಗುತ್ತಿತ್ತು. ಪೂಜೆ, ವಿಶೇಷ ಅಡುಗೆ ಎಲ್ಲ ಮೊದಲಿನಂತೆ ನಡೆಯಿತು. ವಿಜಯದಶಮಿಯ ಸಾಯಂಕಾಲವೇ ಎಲ್ಲರೂ ಹೋಗಿ, ಆನಂದನ ಅಪ್ಪ ಅಮ್ಮ ಮಾತ್ರ ಉಳಿದರು. ಪಾಂಡುರಂಗ ಎಲ್ಲರೆದುರು ಮತ್ತೆ ವಿಷಯ ಎತ್ತಿ, ಸಂಕಟ ಸೃಷ್ಟಿಸಬಹುದು ಅನ್ನುವ ಆತಂಕವಿತ್ತು. ಆದರೆ ಏನೂ ನಡೆದೇ ಇಲ್ಲವೆನ್ನುವಂತೆ ಆತ ಸಹಜವಾಗಿ ಮರಳಿ ಹೋಗಿದ್ದು ಅಚ್ಚರಿಯುಂಟುಮಾಡಿತು. ದೇಶ್ವಂತರು ಮಗ ಸೊಸೆಯೆದುರು ಆನಂದನ ವಿಷಯ ಪ್ರಸ್ತಾಪಿಸಿದರು. ಶಾಂತಾರಾಮ ಮತ್ತು ಮಾಲತಿ ಇದನ್ನು ನಿರೀಕ್ಷಿಸಿರಲಿಲ್ಲ ಅನ್ನುವುದನ್ನು ಅವರ ಮುಖಭಾವವೇ ಹೇಳಿತು. ಸೀಮಂತಿನಿಯ ವಿಷಯ ಅವಳ ತಂದೆಯಿಂದಲ್ಲವಾದರು, ಬೇರೆ ಮೂಲದಿಂದ ಅವರಿಗೆ ತಲುಪಿತ್ತು. ಅದಾದರೆ ಆಗಲಿ ಅನ್ನುವ ಆಸೆಯು ಇತ್ತು. ಇದೀಗ ತಲೆ ಬುಡ ಗೊತ್ತಿಲ್ಲದ ಹುಡುಗಿಗೆ ಮಗ ಒಲಿದಿರುವುದು ಸಂತೋಷ ತಂದಿರಲಿಲ್ಲ. ಇದನ್ನು ಖಂಡಿಸದೆ, ಆನಂದನ ಪರವಾಗೆ ಮುಂದುವರಿದ ಅಪ್ಪ ಅಮ್ಮನ ಮೇಲೂ ಬೇಸರ ಮೂಡಿತು. ಇದನ್ನರಿತ ಬಕುಲಾ, ಸೀಮಂತಿನಿ ಇಲ್ಲಿ ಬಂದು ಉಳಿದದ್ದು, ವಾಪಸಾಗುವಾಗ ಆನಂದನೊಡನೆ ಆಡಿದ ಮಾತು ಎಲ್ಲ ಹೇಳಿ 'ಸೀಮಂತಿನಿ ಸೊಸೆಯಾಗಿ ಬಂದ್ರೆ ನಮಗೇನು ಬೇಡವಾಗಿತ್ತೇನೋ ಶಾಂತೂ? ಅವಳಿಗೆ ಇಲ್ಲಿ ಬಂದಿರುವುದರಲ್ಲಿ ಮನಸಿಲ್ಲ ಕಾಣತದೆ. ಇವನಿಗೆ ಇಲ್ಲಿಂದ ಹೋಗೋದು ಮನಸಿಲ್ಲ. ಆನಂದನಿಗೆ ಹೊಂದುವಂತಾ ಹುಡುಗಿ ಚಂದನಿಕಾ. ಅವನ ಖುಷಿಗಾ ಅಥವಾ ಮತ್ತ್ಯಾರದೊ ಖುಷಿಗಾ ಮದುವೆ ಮಾಡೋದು?' ಕೇಳಿದರು. ಶಾಂತಾರಾಮ ಮೌನವಾಗಿ ಕುಳಿತ. ಆನಂದನ್ಯಾಕೆ ಒಳ್ಳೇ ಕೆಲಸ ಸಿಕ್ಕಿದರೆ ಹೋಗಬಾರದು? ಅನ್ನುವುದು ಅವನ ಅಭಿಪ್ರಾಯವು ಆಗಿತ್ತು. ಅವನಾಗೆ ಇಲ್ಲಿರತೇನೆ ಅಂತ ಬಂದ. ತಾನಾಗ ಯೋಚಿಸಲಿಲ್ಲ. ಈಗ ಪೇಚಿಗೆ ಬಂದಿತ್ತು. ಬಕುಲಾ ಚಂದನಿಕಾಳನ್ನು ಮನೆಗೆ ಕರೆಸಿದರು. ಹುಡುಗಿ ಚಂದವಾಗಿದ್ದಾಳೆ. ಅಲ್ಲದೆ ನಾಕು ಜನರೆದುರು ಹೇಗಿರಬೇಕೆಂದು ತಿಳಿದವಳು ಅನ್ನುವುದು ಯಾರಿಗು ಗೊತ್ತಾಗುವಂತಿತ್ತು. ಹೊರಗೇನೂ ತೋರಿಸಿಕೊಳ್ಳದೆ ಅವಳನ್ನು ಚೆನ್ನಾಗೆ ಮಾತಾಡಿಸಿ ಕಳಿಸಿಕೊಟ್ಟರು ಶಾಂತಾರಾಮ ಮತ್ತು ಮಾಲತಿ.

ರಾತ್ರಿ ಊಟವಾದ ಮೇಲೆ ಶಾಂತಾರಾಮ, ಪಾಂಡುರಂಗ ಇಲ್ಲಿ ಬಂದಿದ್ದರ ಪ್ರಸ್ತಾಪ ತೆಗೆದ. ಅಂತೂ ಆ ಸಂಗತಿ ಮುಗಿಯಿತು ಅನ್ನುವ ನೆಮ್ಮದಿಯಲ್ಲಿದ್ದವರಿಗೆ, ಇಲ್ಲ ಅನ್ನುವುದು ಗೊತ್ತಾಯಿತು. 'ದೊಡ್ಡಮೊತ್ತದ ಹಣ ಸಿಕ್ಕರೆ ಅದರಲ್ಲಿ ತಪ್ಪೇನು ಅಂತ ನನ್ನ ಪ್ರಶ್ನೆ. ರಚಿಸೋದು, ಕೆಡವೋದು ನಿಸರ್ಗದಲ್ಲೆ ನಡೀತಿರತದೆ. ಕೃಷ್ಣನ ದ್ವಾರಕೆಯನ್ನೆ ಸಮುದ್ರ ಮುಳುಗಿಸಲಿಲ್ವ? ಅತಿ ಭಾವನಾತ್ಮಕ ಸಂಬಂಧ ಅದರೊಂದಿಗೆ ನಮಗಾದರೂ ಯಾಕೆ?' ಕೇಳಿದ. ಈ ನಟಿಯ ಮತ್ತು ಸೀಮಂತಿನಿಯರ ಸಮಸ್ಯೆ ಪರಿಹಾರವಾಗುವ ಹಾದಿಯು ಇದರಲ್ಲಿ ಕಾಣಿಸುತ್ತಿತ್ತು ಅವನಿಗೆ. ಆನಂದ ಕೆಲಸ ಹಿಡಿದು ಹೋದರೆ, ಸುಲಭವಾಗಿ ಇಲ್ಲಿಯ ಆಸ್ತಿಯನ್ನು ಮಾರಬಹುದಾದದ್ದು ಮತ್ತದರಿಂದ ಬರುವ ಅನಿರೀಕ್ಷಿತ ಹಣ! ಪಾಂಡುರಂಗನ ಬದಲಿ ಆಯ್ಕೆ, ಅರ್ಥಾತ್ ಪಾಲು ಮಾಡುವುದರ ಬಗ್ಗೆ ಶಾಂತಾರಾಮನಿಗೆ ಅಂತಹ ಆಸಕ್ತಿಯಿಲ್ಲ. ಪಾಲಾದರೆ ತನ್ನ ಪಾಲು ನೋಡಿಕೊಳ್ಳುವುದಾಗಿ ಹೇಳಿ ಆನಂದ ಇಲ್ಲುಳಿಯುತ್ತಾನೆ. ಬೇಡ ಅನ್ನಲು ಸಾಧ್ಯವಿಲ್ಲ. ಹೀಗಾಗಿ ತನಗೇನೂ ಲಾಭವಿಲ್ಲ. ಕಟ್ಟಡವನ್ನು